ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3783
ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಹಾಲಪ್ಪ ಹೆಚ್. (ಹೊಸನಗರ)
ಉತ್ತರಿಸುವವರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

	ಪ್ರಶ್ನೆ	ಉತ್ತರ
ಅ	ಹೊಸನಗರ ತಾಲ್ಲೂಕಿನಲ್ಲಿ ಹಾಲು ಮಡ್ಡಿಮರ (ದೂಪದ ಮರ) ಕಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮವೇನು?	ಹಾಲುಮಡ್ಡಿ ಮರಗಳ ಕಡಿತಲೆ ಪ್ರಕರಣಗಳು ಇರುವುದಿಲ್ಲ. ಆದರೆ ಅಕ್ರಮವಾಗಿ ಹಾಲುಮಡ್ಡಿ ಸಂಗ್ರಹಣೆ ಗಮನಕ್ಕೆ ಬಂದಿದೆ. ಈ ಬಗ್ಗೆ ಕರ್ನಾಟಕ ಅರಣ್ಯ ಕಾಯಿದೆ 1963 ರಂತೆ ಅರಣ್ಯ ಅಪರಾಧ ಪ್ರಕರಣ ದಾಖಲಿಸಿ ಅಕ್ರಮ ವಾಗಿ ಸಂಗ್ರಹಿಸಿದ ಹಾಲುಮಡ್ಡಿಯನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗಿದೆ.
ಆ	ಹಾಲು ಮಡ್ಡಿಮರ ಕಡಿಯಲು ಟೆಂಡರ್ ಕರಿಯಲಾಗಿದೆಯೇ:	ಇಲ್ಲ
ಇ	ಅನಧಿಕೃತವಾಗಿ ಮರ (ದೂಪದ ಮರ) ಕಡಿಯುವವರ ವಿರುದ್ಧ ಕೈ ಗೊಂಡಿರುವ ಕ್ರಮವೇನು:	ಉದ್ಭವಿಸುವುದಿಲ್ಲ
ಈ	ಇಷ್ಟು ಪ್ರಕರಣ ದಾಖಲಾಗಿದೆ;	ಉದ್ಭವಿಸುವುದಿಲ್ಲ
ಉ	ಈ ಪ್ರಕರಣಗಳ ಇತ್ಯರ್ಥದಿಂದ ಬಂದ ಆದಾಯವೆಷ್ಟು; ವಿವರ ನೀಡುವುದು?	ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ:316 (3786)

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಹೆಚ್.ಹಾಲಪ್ಪ: ಉತ್ತರವನ್ನು ಒದಗಿಸಿದ್ದಾರೆ, ಆದರೆ ಈ ಹಾಲುಮಡ್ಡಿ ಅಕ್ರಮವಾಗಿ ದೂಪದ ಮರಗಳನ್ನು ಟ್ಯಾಪ್ ಮಾಡಿರುವ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ನಾನು ಕೇಳಿದ್ದೇನೆ. ಅದರಲ್ಲಿ ಅಕ್ರಮವಾಗಿ ಟ್ಯಾಪ್ ಮಾಡುವಂತಹ ಹಾಲುಮಡ್ಡಿಮರವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿರುವುದಾಗಿ ಹೇಳಿದ್ದಾರೆ. ಅದರಲ್ಲಿ ಎಷ್ಟು ಮರಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆ, ಹಾಗೂ ಈ ಟ್ಯಾಪಿಂಗ್ ಮಾಡಲಿಕ್ಕೆ ಇರುವ ಕಾನೂನು ಕಟ್ಟಳೆಗಳು ಏನು? ಮತ್ತು ಈ ಮರವನ್ನು ಯಾವ ಹಂತದಲ್ಲಿ, ಎಷ್ಟರಮಟ್ಟಿಗೆ, ಬಲಿತ ಮರಗಳನ್ನು ಎಷ್ಟು ಸುತ್ತಳತೆಯಲ್ಲಿ, ಮರಗಳನ್ನು ಟ್ಯಾಪ್ ಮಾಡಿಸುತ್ತೀರಿ ಎಂಬ ಬಗ್ಗೆ ದಯಮಾಡಿ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವರು ಪ್ರಶ್ನೆ ಕೇಳಿರುವುದು ಎಷ್ಟು ಮರಗಳನ್ನು ಕಡಿದಿದ್ದೀರಿ? ಕಡಿದಿಲ್ಲವೆಂದು ನಾನು ಹಾಗೆ ಉತ್ತರಿಸಬಹುದಾಗಿತ್ತು, ಆದರೆ ನಾನು ಹಾಗೆ ಒಳ್ಳೆಯ ಉತ್ತರ ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಹೇಳಬೇಕು. ಏಕೆಂದರೆ, ಎಲ್ಲಾ ಇಲ್ಲ ಎಂದು ಇದೆ, ಆದರೂ ಕೂಡ ನಾವು ಕಡಿಯುವುದಿಲ್ಲ, ಕೆತ್ತುವುದು ಎಂದು ಹೇಳಿದ್ದೇವೆ. ಅದನ್ನು ನಾನು ಉತ್ತರದಲ್ಲಿ ಒಪ್ಪಿಕೊಂಡಿದ್ದೇನೆ. ಟ್ಯಾಪಿಂಗ್ ಒಂದು ಇಂಚು ಗಾತ್ರ, ಒಂದು ಫೀಟ್ ಉದ್ದ, ಒಂದು ಇಂಚು ಗಾತ್ರ ಮಾಡಿದಾಗ ಅದರೊಳಗೆ ದೂಪ ಬರುತ್ತದೆ. ಆ ದೂಪ ಒಂದು ಕ.ಜಿ. ಆಗಬಹುದು, ಈಗ ಅದನ್ನು ಈ ಪ್ರಕಾರ ತೆಗೆಯುತ್ತಿದ್ದಾರೆ. ಅದು ಒಂದಾದ ಮೇಲೊಂದು ಅದರ ಪಕ್ಕದ ಮರಕ್ಕೆ ತೆಗೆಯುತ್ತಾರೆ ಅಂದರೆ ಮೂರು ಅಡಿ ಗಾತ್ರ ಇರುವ ಮರಕ್ಕೆ ಅಡ್ಡವಾಗಿ ಕನಿಷ್ಠ ಎರಡು ಅಡಿಯವರೆಗೆ ಮಾತ್ರ ತೆಗೆಯುತ್ತಾರೆ. ಅದಕ್ಕಿಂತ ಹೆಚ್ಚಿಗೆ ಒಂದು ಅಡಿಯೂ ತೆಗೆಯುವುದಿಲ್ಲ. ಅದರಲ್ಲಿ ಹೆಚ್ಚು ನಾರಿನಂಶವಿರುವುದರಿಂದ ಒಂದು ಇಂಚಿಗಿಂತ ಹೆಚ್ಚಿಗೆ ತೆಗೆಯಲಿಕ್ಕೆ ಹೋದರೆ ಆ ಮರ ಒಣಗಿಹೋಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: (ಮುಂದು) ಅದಕ್ಕೆ ಆ ಮರ ಕಡಿದರೆ ಅದು ಯಾವ ಉಪಯೋಗಕ್ಕೂ ಬರುವುದಿಲ್ಲ. ಅದು ಯಾವುದಕ್ಕೂ ಬರುವುದಿಲ್ಲ, ಅದು ಬರೀ ವುಡ್‌ಗೆ ಬರುತ್ತದೆ. ಅದು ಪ್ಲೈ ವುಡ್ ಆಗುತ್ತದೆ. ಬೇರೆ ಯಾವುದಕ್ಕೂ ಬರುವುದಿಲ್ಲ ಕಡಿಯತಕ್ಕಂತಾದ್ದು ಅಲ್ಲ. ಅದಕ್ಕಾಗಿ ಆ ಮರದಿಂದ ಹರಾಜು ಮಾಡಿದ್ದೇವೆ, ಹೊಸನಗದಲ್ಲಿ, ನಗರದಲ್ಲಿ ಅದನ್ನು 15 ಲಕ್ಷಕ್ಕೆ ಹರಾಜು ಮಾಡಿದ್ದೇವೆ. ಎರಡುವರ್ಷದ ಸಲುವಾಗಿ, ಎರಡುವರ್ಷ ತೆಗೆದ ಮೇಲೆ ಮತ್ತೆ ಎರಡುವರ್ಷ ಬಿಟ್ಟಿರುತ್ತೇವೆ. ಮತ್ತೆ ಪುನಃ ಆ ಮರ ಸರಿಯಾಗುತ್ತದೆ. ಆ ನಂತರ ಬೇರೆ ಭಾಗ ಕೊಡುತ್ತಾರೆ. ಆ ಪ್ರಕಾರ ಹೊಸನಗರ, ನಗರ ಮತ್ತು ಶಿವಮೊಗ್ಗ ದಲ್ಲಿ ಮಾತ್ರ ಇದೆ. ಇದು ಬೇರೆ ಎಲ್ಲೂ ಇಲ್ಲ. ವೈಲ್ಡ್ ಲೈಫ್‌ನಲ್ಲಿ ಕೇವಲ ಹೊಸನಗರ, ಶಿವಮೊಗ್ಗ ನಗರ ಇಷ್ಟರಲ್ಲಿ ಮಾತ್ರ ಇದೆ. ಅಲ್ಲಿ ಮಾತ್ರ ಇದನ್ನು ಮಾಡುತ್ತೇವೆ. ಅಲ್ಲಿ 15 ಲಕ್ಷ ಮಾತ್ರ ಹರಾಜಿನಲ್ಲಿ ಹೋಗಿದೆ. ದಂಡ ಹಾಕಿದ್ದು ಅದು ಕಿಮ್ಮತ್ತು ಒಂದು ಕೆ.ಜಿ.ಗೆ 150 ರಿಂದ 200 ರವರೆಗೂ ಮಾರುತ್ತೇವೆ.

ಶ್ರೀ ಹೆಚ್.ಹಾಲಪ್ಪ: ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ಗೆ 400 ರೂಪಾಯಿ ಇದೆ. ಈ ಹಿಂದೆ ಮರಗಳನ್ನು ಸಾಗರ ಉಪ ವಿಭಾಗದಲ್ಲಿ ಎಣಿಕೆಯನ್ನು ಏನಾದರೂ ಮಾಡಿಸಿದ್ದೀರಾ? ಅದು ನಡೆದಿದೆಯೇ? ದೂಪದ ಮರ ಇದೆಯಲ್ಲ ಇದನ್ನು ಏನಾದರೂ ಎಣಿಕೆ ಮಾಡಿದ್ದೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೇ, ಮರಗಳ ಎಣಿಕೆ ಮಾಡುವಂತಹ ಪರಿಸ್ಥಿತಿಯು ಇಲ್ಲ. ಪದ್ಧತಿಯು ಇಲ್ಲ. ಆದರೆ ರೇಂಜ್ ಹೊಸನಗರ ಮತ್ತು ನಗರ ಅಂತ ರೇಂಜ್ ಮಾಡಿದ್ದೇವೆ. ಮರ ಎಣಿಕೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಹಾಲಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು ಮರಗಳ ಎಣಿಕೆ ಇಲ್ಲ ಅಂತ. ಹಿಂದೆ ಒಂದು ಸಲ ಟೆಂಡರ್ ಕರೆದಿದ್ದನ್ನು ಮರಗಳ ಎಣಿಕೆಯಾಗಿಲ್ಲ ಅಂತ ಹೇಳಿ ಜಿಲ್ಲೆಯ ಉಸ್ತುವಾರಿ ಸಚಿವರು ಮತ್ತು ಅರಣ್ಯ ಸಚಿವರು ಒಂದು ಟೆಂಡರ್ ಡೇಟ್‌ನ್ನು ಕ್ಯಾನ್ಸಲ್ ಮಾಡಿದ್ದಾರೆ. ಮರಗಳ ಎಣಿಕೆ ಮಾಡಿ ತಾವು ಟೆಂಡರ್ ಕರೆಯಿರಿ ಅಂತ ಹೇಳಿ. ಇದರ ಬಗ್ಗೆ ತಾವು ಏನು ಹೇಳುತ್ತೀರಿ, ಸರ್ಕಾರ ಲೆಟರ್ ಬರೆದಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೇ, ಎಣಿಕೆ ಮಾಡುವ ವಾಟಾಳ್ ನಾಗರಾಜ್‌ರವರು ಪ್ರಶ್ನೆಯನ್ನು ಕೇಳಿದರು ವಿಧಾನ ಸಭೆಯಲ್ಲಿ ಒಟ್ಟು ಮರ ಎಷ್ಟು ಇದೆ ರಾಜ್ಯದಲ್ಲಿ ಅಂತ ನಿಮ್ಮ ತಲೆಯ ಮೇಲೆ ಎಷ್ಟು ಕೂದಲು ಇದೆಯೋ ಅಷ್ಟು ಇದೆ ಅಂತ ಹೇಳಿದ್ದೆ, ದಯಮಾಡಿ ಕ್ಷಮಿಸಿ, ಏಕೆಂದರೆ ಎಣಿಸುವುದಕ್ಕೆ ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ ಅದಕ್ಕೆ ಪೂರಕವಾಗಿ, ಏಕೆಂದರೆ ನನ್ನ ಕ್ಷೇತ್ರವೂ ಬರುತ್ತದೆ. ಹೊಸನಗರದಲ್ಲಿ ನನ್ನ ಕ್ಷೇತ್ರವೂ ಬರುತ್ತದೆ. ಎರಡು ರೇಂಜ್‌ನಲ್ಲೂ ಕೂಡ ಹರಾಜು ಹಾಕಿದ್ದೀರಿ. ತಾವು ಮರ ಕಡಿಯಲಿಲ್ಲ ಅಂತ ಹೇಳುತ್ತಿದ್ದೀರಿ ಸರಿ ಇದೆ. ಆದರೆ ಟ್ಯಾಪಿಂಗ್ ಸೈಂಟಿಫಿಕ್ ಆಗಿ ಮಾಡದೇ ಹೋದರೆ ಮರ ಒಣಗಿ ಸತ್ತು ಹೋಗುತ್ತದೆ. ನಮ್ಮ ಗುತ್ತಿಗೆದಾರರಿಗೆ ಎಷ್ಟು ಹಾಲು ಬರುತ್ತದೆ ಎನ್ನುವುದು ಮುಖ್ಯವೇ ಹೊರತು ಮರ ಎಷ್ಟು ದಿವಸ ಬದುಕಿರಬೇಕು ಎನ್ನುವುದು ಮುಖ್ಯವಲ್ಲ. ಮುರುಗನವಳ್ಳಿ, ಮತ್ತು ಈ ದೂಪದ ಮಡ್ಡಿ ದೂಪ, ಎರಡನ್ನೂ ಕೂಡ ನೀವು ಹರಾಜು ಹಾಕಿಬಿಡುತ್ತೀರಿ. ಬೇಕಾಬಿಟ್ಟಿಯಾಗಿ ಇವತ್ತು ಟ್ಯಾಪಿಂಗ್ ಮಾಡುತ್ತಿದ್ದಾರೆ. ಮರಗಳು ಒಣಗಿ ಹಾಳಾಗುತ್ತಿವೆ. ಇವು ಅಮೂಲ್ಯವಾದ ಆಸ್ತಿ. ನೀವು ಒಪ್ಪಿಕೊಂಡ ಹಾಗೆ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಇದೆ. ಅದು ದೂಪ ಅಮೂಲ್ಯವಾಗಿರತಕ್ಕಂಥ ಸಸ್ಯರಾಶಿಯನ್ನು ಹಾಳುಮಾಡುವಂತಹ ಕೆಲಸ ಇವತ್ತು ನಡೆಯುತ್ತಿದೆ. ಅಧಿಕೃತವಾದ ಗುತ್ತಿಗೆದಾರರು ಒಂದಷ್ಟು ತೆಗೆದರೆ ಅನಧಿಕೃತವಾಗಿರತಕ್ಕಂಥವರು ಕಾಡಿನಲ್ಲಿ ಹೋಗಿ ಅದೇ ದಂಧೆ ಮಾಡುತ್ತಿದ್ದಾರೆ. ನಿಮ್ಮ ಅರಣ್ಯ ಇಲಾಖೆಯವರು ಇದನ್ನು ಬಹಳ ಸೂಕ್ಷ್ಮವಾಗಿ, ಎಚ್ಚರಿಕೆಯಿಂದ ಇದನ್ನು ನೋಡದೇ ಹೋದರೆ ಬಹಳ ಕಷ್ಟ. ಎಲ್ಲೋ ಒಂದಷ್ಟು ಹಿಡಿಯುತ್ತಾರೆ, ಕೈ ಬಿಡುತ್ತಾರೆ. ಅವರು ಇವರು ಶಾಮೀಲಾಗುವಂತಾದ್ದು ನಡೆಯುತ್ತದೆ.

ಉಪಾಧ್ಯಕ್ಷರು: ಮಾನ್ಯ ಅರಗ ಜ್ಞಾನೇಂದ್ರರವರೇ ಇದು ಭಾಷಣ ಆಯಿತು ಪ್ರಶ್ನೆ ಆಗಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಮುರುಗನವಳ್ಳಿ ಮರವಂತೂ ಕಡಿದು ಕಡಿದು ಹಾಕುತ್ತಿದ್ದಾರೆ. ಇದನ್ನು ದಯವಿಟ್ಟು ಉಳಿಸುವಂತಾದ್ದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅಥವಾ ಏನಾದರೂ ತಿದ್ದುಪಡಿ ಮಾಡುತ್ತೀರಾ? ಅಥವಾ ಇದನ್ನು ಉಲ್ಲಂಘನೆ ಮಾಡಿದಾಗ ನಿಮ್ಮ ಹರಾಜು

ಕಂಡೀಷನ್ ಅನ್ನು ಉಲ್ಲಂಘನೆ ಮಾಡಿದಾಗ ಏನು ಶಿಕ್ಷೆ ಕೊಡುತ್ತೀರಿ ಅಂತ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪ್ಪಲ್ಲಿ: ಮಾನ್ಯ ಅಧ್ಯಕ್ಷರೇ, ಈಗ ನಾವು ಹರಾಜು ಪರಿಶೀಲನೆಯಲ್ಲಿದೆ. ಏಕೆಂದರೆ ನೀವು ಹೇಳಿದಂತೆ ಸರಿ. ಒಂದು ರೀತಿಯಿಂದ ಅವರ ಮೇಲೆ ನಿಗ್ರಹಣೆ ಇದೆ ಆದರೂ ಕೂಡ ಕಳ್ಳತನದಿಂದ ಕೆಲವರು ಕಡಿದುಕೊಂಡು ಹೋಗುತ್ತಿದ್ದಾರೆ. ಒಂದು ಇಂಚ್‌ಗಿಂತ ಹೆಚ್ಚು ಕಡಿದರೆ ಮರ ಹೋಗುತ್ತದೆ. ಅದನ್ನು ಎರಡು ಫೀಟ್ ತೆಗೆದರೆ ಉಳಿಯುತ್ತದೆ, ಅದಕ್ಕಿಂತ ಹೆಚ್ಚು ತೆಗೆದರೆ ಉಳಿಯುವುದಿಲ್ಲ. ಅದು ತಪ್ಪಾಗುತ್ತದೆ ಅದನ್ನು ಸೈಂಟಿಫಿಕ್ ಆಗಿಯೇ ತೆಗೆಯಬೇಕು. ಸೈಂಟಿಫಿಕ್ ಆಗಿ ತೆಗೆಯದಿದ್ದವರನ್ನು ತಕ್ಷಣ ಹರಾಜಿನಿಂದ ತೆಗೆಯುತ್ತೇವೆ, ಮುಟ್ಟುಗೋಲು ಹಾಕಿಕೊಳ್ಳುತ್ತೇವೆ. ಮತ್ತೆ ಯಾರು ಹರಾಜಿನಲ್ಲಿ ಇಲ್ಲದೆ 60 ಕೆ.ಜಿ. ಎನ್ನುವುದು ಏನು ಇದೆ ಈ ರೀತಿ ಹೊರಗಡೆ ತೆಗೆದವರನ್ನು ಹಿಡಿದಿದ್ದೇವೆ. ಅದಕ್ಕೆ ನಮ್ಮ ವಿಚಾರ ಏನು ಇದೆ ಅಂದರೆ ಇದು ನಿಲ್ಲುತ್ತಿಲ್ಲ. ಇದನ್ನು ಬಂದ್ ಮಾಡಬೇಕಾದರೆ ಯಾವ ಪ್ರಕಾರವಾಗಿ ಉತ್ತರ ಕರ್ನಾಟಕದಲ್ಲಿ ಬಂದ್ ಮಾಡಿದ್ದೇವೆ. ಅದರ ಬಗ್ಗೆ ವಿಚಾರಣೆ ಮಾಡಿ ಸರ್ಕಾರದ ಮಟ್ಟದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.